ಶ್ರೀ ರಾಮಕೃಷ್ಣ ಹೆಗಡೆ (ಮಂಚಿ ಮಂತ್ರಿಗಳು).—

ಅ) ಸರ್ಕಾರವು ಮೂರು ಹಂತಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆಗೆಯಲು ತೀರ್ಮಾನ ಕೈಗೊಂಡಿದೆ. ಅಗ್ನಿಶಾಮಕ ಠಾಣೆಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮೊದಲು ತೆರೆಯಲಾಗುವುದು. ಎರಡನೇ ಹಂತದಲ್ಲಿ ಉಪವಿಭಾಗ ಕೇಂದ್ರಗಳಲ್ಲಿ ತೆರೆಯಲಾಗುವುದು. ಮೂರನೆಯ ಹಂತದಲ್ಲಿ ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಹಾಲಿ ಇರತಕ್ಕ ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಅಗ್ನಿಶಾಮಕ ಠಾಣೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು. ಇದು ಸರ್ಕಾರವು ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಅನುಸರಿಸುತ್ತಿರುವ ಸಾಮಾನ್ಯ ನೀತಿಯಾಗಿದೆ.

ಈ ಮೇಲ್ಕಾಣಿಸಿದ ನೀತಿಯಂತೆ ಉಪವಿಭಾಗಕ್ಕಿಂತ ಸಿಂಧನೂರಿನಲ್ಲಿ ಹೆಚ್ಚು ಬೆಂಕಿ ಅಕಸ್ಮಿಕಗಳು ಸಂಭವಿಸಿದ್ದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಸರ್ಕಾರವು ಪರಿಶೀಲಿಸುತ್ತದೆ.

ಆ) ಸಿಂಧನೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಮೇಲ್ಕಂಡಂತೆ ಸ್ಥಾಪಿಸಲಾಗುವುದಂ. ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಆರಕ್ಷಕ ಇಲಾಖೆಯನ್ನು ಆಧುನೀಕರಣ ಗೊಳಿಸುವುದು.

೧೧೫೭. **ಶ್ರೀ ಪಿ ರಾಂದೇವ್** (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

ಅ) ರಾಜ್ಯದ ಗೃಹ ಇಲಾಖೆಯನ್ನು ವಿಸ್ತರಿಸಲು ಮತ್ತು ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಆರಕ್ಷಕ ಇಲಾಖೆಯನ್ನು ಆತ್ಯಾಧುನಿಕ ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಇ) ಪೋಲೀಸ್ ಇಲಾಖೆಯಲ್ಲಿ ಖಿನೇ ದರ್ಜೆ ಅಂದರೆ ಖಿನೇ ಡಿಗ್ರಿ ಮಾರ್ಗವನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಈ) ರಾಜಕೀಯ ಕೈದಿಗಳ ಬಗ್ಗೆ ಆರಕ್ಷಕರ ನೀತಿಯನ್ನು ಬದಲಾಯಿಸಲು ಸರ್ಕಾರದಪರಂ ತೆಗೆದುಕೊಂಡ ಕ್ರಮಗಳೇವು ?

ಶ್ರೀ ರಾಮಕೃಷ್ಣ ಹೆಗಡೆ)ಮಾನ್ಯ ಮುಖ್ಯಮಂತ್ರಿಯವರು.)—

ಅ) ಗೃಹ ಇಲಾಖೆ ರಾಜ್ಯ ಸಚಿವಾಲಯದ ಒಂದು ಅಂಗ. ಇದರ ವಿಸ್ತರಣೆ ಹಾಗೂ ಆಧುನೀಕರಣದ ಬಗೆಗಿನ ಯಾವ ಯೋಜನೆಯೂ ಸರ್ಕಾರದ ಮುಂದಿಲ್ಲ.

ಆ) ಆರಕ್ಷಕ ಇಲಾಖೆಯನ್ನು ಆಧುನೀಕರಣ ಗೊಳಿಸಲು ಕೆಳಕಂಡ ಮುಂಜಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.—

೧. ರಾಜ್ಯದಲ್ಲಿ ವಿಧಿವಿಜ್ಞಾನ ಪ್ರಯೋಗಾಲಯಕ್ಕಾಗಿ ಹೊಸ ಕಟ್ಟಡಕ್ಕೆ ಮಂಜೂರಾತಿ ನೀಡಲಾಗಿದೆ.

೨. ಜಿಲ್ಲಾ ಮಟ್ಟಗಳಲ್ಲಿ ಸಂಚಾರಿ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ಏರ್ಪಡಿಸಲಾಗಿದೆ.

೩. ಲಕ್ಷಕ್ಕೆ ಮಿಂಚಿರುವ ಜನಸಂಖ್ಯೆಯುಳ್ಳ ಎಲ್ಲಾ ಪಟ್ಟಣಗಳಲ್ಲಿಯೂ ಕೇಂದ್ರ ನಿಸ್ತಂತು ನಿಯಂತ್ರಣ ವ್ಯವಸ್ಥೆಗಳನ್ನು ಒದಗಿಸಲು ಯೋಜನೆಯನ್ನು ತಯಾರಿಸಲಾಗಿದೆ. ಇದರ ಪ್ರಕಾರ ಇಂಥಹ ಪಟ್ಟಣಗಳಲ್ಲಿ ಸಂಚಾರಿ ನಿಸ್ತಂತು ಸಜ್ಜಿತ ವಾಹನಗಳು ಗಸ್ತು ಮಾಡುತ್ತವೆ.

೪. ರಾಜ್ಯದ ಹೆದ್ದಾರಿಗಳಲ್ಲಿ ಗಸ್ತು ಬಿಗಿಗೊಳಿಸಲು ಸಂಚಾರೀ ಘಟಕಗಳನ್ನು ಒದಗಿಸಲಾಗಿದೆ. ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಿಗೂ ಇದನ್ನು ಒದಗಿಸಲಾಗುತ್ತದೆ.

೫. ಬೆಂಗಳೂರು ನಗರ ಹಾಗೂ ಇತರ ಮುಖ್ಯ ನಗರಗಳಲ್ಲಿ ಸ್ವಯಂ ಚಾಲಿತ ಟ್ರಾಫಿಕ್ ದೀಪಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಲು ಯೋಜನೆಯನ್ನು ತಯಾರಿಸಲಾಗಿದೆ. ಹಂತ ಹಂತದಲ್ಲಿ ಇದನ್ನು ಮಂಜೂರಿ ನೀಡಲಾಗುತ್ತದೆ.

ಅಷ್ಟೇ ಅಲ್ಲ. ಈ ಸ್ವಯಂಚಾಲಿತ ಟ್ರಾಫಿಕ್ ದೀವಗಳನ್ನು ಸಿಂಕ್ರೊನೈಸ್ ಮಾಡಬೇಕೆಂದೂ ಮಾಡಿದ್ದೇವೆ.

೩) ತನಿಖಾ ಸಮಯದಲ್ಲಿ ಅಪರಾಧಿಗಳಿಗೆ ಚಿತ್ರಹಿಂಸೆ ಕೊಟ್ಟು ಮೊಕದ್ದಮೆಗಳನ್ನು ಪತ್ತೆ ಹಚ್ಚುವ ಪ್ರವೃತ್ತಿಯನ್ನು ತೆಗೆಯಲು ಸೂಕ್ತವಾದ ಆದೇಶಗಳನ್ನೊಳಗೊಂಡ ಸುತ್ತೋಲೆಗಳನ್ನೂ ಹೊರಡಿಸಲಾಗಿದೆ. ಹಿರಿಯ ಅಧಿಕಾರಿಗಳು ತಮ್ಮ ನೀರಿಕ್ಷಣಾ ಸಮಯದಲ್ಲಿ ಈ ಆದೇಶಗಳ ಪಾಲನೆ ಬಗ್ಗೆ ಹೆಚ್ಚಿನ ಆಸ್ಥೆಯನ್ನು ವಹಿಸಿದ್ದಾರೆ. ಇದರಲ್ಲಿ ತಪ್ಪಿತಸ್ಥರಾದ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಲಾಗುತ್ತಿದೆ. ತರಬೇತಿ ಸಮಯದಲ್ಲಿ ಅಧಿಕಾರಿಗಳಿಗೆ ವೈಜ್ಞಾನಿಕ ಪದ್ಧತಿಗಳ ಮೇಲೆ ಮಾತ್ರವೇ ಅವಲಂಭನೆಯಿರಬೇಕೆಂಬ ಅಂಶವನ್ನು ಒತ್ತಿಒತ್ತಿ ಹೇಳಲಾಗುತ್ತಿದೆ. ವಿಧಿ ವಿಜ್ಞಾನದ ಪ್ರಯೋಗಾಲಯ ಆಧುನೀಕರಣ ಹಾಗೂ ಬೆರಳಚ್ಚು ಘಟಕಗಳ ವಿಸ್ತರಣೆಯಿಂದ ಈ ಪ್ರವೃತ್ತಿ ಮಾಯವಾಗುವುದರಲ್ಲಿ ಸಂದೇಹ ಇಲ್ಲ.

ಈ) ರಾಜಕೀಯ ಕೈದಿಗಳ ಬಗ್ಗೆ ಸೌಜನ್ಯದಿಂದ ನಡೆದುಕೊಳ್ಳಬೇಕು. ಸಂಬಂಧಿಕರನ್ನು ಹಾಗೂ ವಕೀಲರನ್ನು ಸಂಪರ್ಕಿಸಲು ನೆರವು ನೀಡಬೇಕು ಊಟೋಪಚಾರಗಳಲ್ಲಿ ಯಾವ ತೊಂದರೆಯೂ ಆಗಬಾರದು ಎಂಬುದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ನೀಡಲಾಗಿದೆ.

ಶ್ರೀ ಪಿ ರಾಮದೇವ್.—ಆಧುನೀಕರಣದ ಬಗ್ಗೆ ಯಾವ ಯೋಜನೆಯೂ ಸರಕಾರದ ಮುಂದಿಲ್ಲ ಎಂದು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಸದಸ್ಯರು ಹೋಮ್ ಡಿಪಾರ್ಟ್‌ಮೆಂಟ್ ಎಂದು ಹೇಳಿದರು. ಹೋಮ್ ಡಿಪಾರ್ಟ್‌ಮೆಂಟ್, ಹೋಮ್ ಸೆಕ್ರೆಟರಿಯೇಟ್‌ನಲ್ಲಿ ಒಂದುಭಾಗ ಹೋಮ್ ಡಿಪಾರ್ಟ್‌ಮೆಂಟ್ ಆಧುನೀಕರಣ ಏನೂ ಇಲ್ಲ. ಪೊಲೀಸ್ ಡಿಪಾರ್ಟ್‌ಮೆಂಟ್ ಆಧುನಿಕರಣ ಮಾಡುತ್ತೇವೆ.

ಶ್ರೀ ಪಿ. ರಾಮದೇವ್.— ಈಗ ಪೊಲೀಸ್ ಡಿಪಾರ್ಟ್‌ಮೆಂಟ್ ಆಧುನೀಕರಣ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಧರ್ಮವೀರ ಆಯೋಗದ ಒಂದು ವರದಿ ಬಂದಿದೆ. ಅದನ್ನು ಕೇಂದ್ರ ಸರಕಾರ ಒಪ್ಪಿಲ್ಲ. ರಾಜ್ಯ ಸರಕಾರ ಈ ಬಗ್ಗೆ ಯಾವುದಾದರೂ ಒಂದು, ವರದಿಯಲ್ಲಿರತಕ್ಕ ಅಂಶಗಳ ಬಗ್ಗೆ ಕ್ರಮ ತೆಗೆದುಕೊಂಡಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಧರ್ಮವೀರ ಆಯೋಗದ ವರದಿಯನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಯಾವ ಯಾವ ಕ್ರಮ ನಾವು ತೆಗೆದುಕೊಳ್ಳಬಹುದೆಂಬ ಬಗ್ಗೆ ಒಂದು ಕಮಿಟಿ ಮಾಡಿದ್ದೆವು. ಈಗ ಆ ಕಮಿಟಿ ಅಭಿಪ್ರಾಯ ತೆಗೆದುಕೊಂಡು ಕೆಲವೊಂದು ಕ್ರಮ ಈಗಾಗಲೇ ತೆಗೆದುಕೊಂಡಿದ್ದೇವೆ.

ಶ್ರೀ ಪಿ. ರಾಮದೇವ್ — ತಾವು ಸ್ವಾತಂತ್ರ್ಯ ಪೂರ್ವದಲ್ಲಿ ಜೈಲಿಗೆ ಹೋಗಿದ್ದೀರಿ. ಸ್ವಾತಂತ್ರ್ಯ ಬಂದನಂತರವೂ ಜೈಲಿಗೆ ಹೋಗಿದ್ದೀರಿ. ತಮಗೆ ಜೈಲಿನ ಅನುಭವ ಚೆನ್ನಾಗಿದೆ. ಈಗ ತಮ್ಮ ಅನುಭವದ ಹಿನ್ನೆಲೆಯಲ್ಲಿ ಇದನ್ನು ಏನಾದರೂ ಆಧುನಿಕರಣಗೊಳಿಸುತ್ತೀರಾ ? ರಾಜಕೀಯ ಖೈದಿಗಳ ಬಗ್ಗೆ ಏನಾದರೂ ಒಂದು ಸೆಪರೇಟ್ ಜೈಲ್ ಮ್ಯಾನ್ಯುಯಲ್, ಸೆಪರೇಟ್ ಜೈಲ್ ಮಾಡತಕ್ಕ ಯೋಜನೆ ಇದೆಯೇ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ರಾಜಕೀಯ ಖೈದಿಗಳ ಬಗ್ಗೆ ಪ್ರತ್ಯೇಕ ವ್ಯವಸ್ಥೆ ಈಗಾಗಲೇ ಇದೆ. ಆದರೆ ಅದು ಆಷ್ಟು ಸಮರ್ಪಕವಾಗಿಲ್ಲ ಅದನ್ನು ಇನ್ನೂ ಉತ್ತಮ ಪಡಿಸುವ ಬಗ್ಗೆ, ರಾಜಕೀಯ ಖೈದಿಗಳನ್ನು ಪ್ರತ್ಯೇಕವಾಗಿ ಇಡುವ ವ್ಯವಸ್ಥೆ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಮಾಣಿಕರಾವ್ ಪಾಟೀಲ್.— ಇದರಲ್ಲಿ "What are the steps taken by the Government to improve the 3rd degree methods in the police department" ಎಂದು ಇದೆ. ಅದು ಏನು ಇಂಪ್ರೂವ್‌ಮೆಂಟ್, ತಾವೇನು ಗಟ್ಟಿಯಾಗಿರುವ ಲಾಠಿಯನ್ನು ಕೊಡಬೇಕೆಂದು ವಿಚಾರ ಮಾಡಿದ್ದೀರಾ, ಪ್ಲಾಸ್ಟಿಕ್ ಬುಲೆಟ್ ಹೆಚ್ಚು ಉಪಯೋಗ ಮಾಡಿ, ಹೆಚ್ಚು ಪೆಟ್ಟು ಹತ್ತದ ರೀತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಾ ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ,— ಈಗ ಮಾನ್ಯ ಸದಸ್ಯರೆಲ್ಲರಿಗೂ ಹಾಗೂ ಸದನಕ್ಕೂ ಗೊತ್ತಾಗಿರುತ್ತೆ. ಪೊಲೀಸರ ವರ್ತನೆಯಲ್ಲಿ, ಧೋರಣೆಯಲ್ಲಿ, ಕಳೆದ ಒಂದು ವರ್ಷದಲ್ಲಿ ಬಹಳ ಅರ್ಥಪೂರ್ಣವಾದ ಬದಲಾವಣೆ ಆಗಿದೆ. ಅನಾವಶ್ಯಕವಾಗಿ ಬಲಪ್ರಯೋಗ ಅವರು ಮಾಡಕೂಡದು, ಪೊಲೀಸ್ ಇರತಕ್ಕದ್ದು, ಜನರ ಮನಸ್ಸಿನಲ್ಲಿ ವಿಶ್ವಾಸ ಹುಟ್ಟಿಸಲಿಕ್ಕೆ, ಮತ್ತು ಯಾರಿಗೆ ತೊಂದರೆ ಇದೆಯೋ ಅವರಿಗೆ ರಕ್ಷಣೆ

ಕೊಡಲಿಕ್ಕೆ. ದುಷ್ಪರಿಗೆ ಶಿಕ್ಷೆ ಕೊಡಲಿಕ್ಕೆ. ಈಗ ಆಧುನಿಕ ಉಪಕರಣಗಳ ಬಗ್ಗೆ ಹೇಳುವುದಾದರೆ, ಪ್ಲಾಸ್ಟಿಕ್ ಬುಲೆಟ್ ಬಗ್ಗೆ ನಾವು ಮೊದಲೇ ವಿಚಾರ ಮಾಡಿದ್ದೇವೆ. ಪ್ಲಾಸ್ಟಿಕ್ ಬುಲೆಟ್‌ನಲ್ಲೂ ಕೂಡಾ ಅಷ್ಟೊಂದು ಎಫೆಕ್ಟೀವ್ ಆಗುವುದಿಲ್ಲ, ಪರಿಣಾಮಕಾರಿ ಆಗುವುದಿಲ್ಲ. ಒಂದೊಂದು ಸಲ ಅದರಿಂದ ಶಾಶ್ವತವಾದ ಊನತೆ ಬರಬಹುದೆಂದೂ ಕೆಲವು ಜನರ ಅಭಿಪ್ರಾಯ. ಅದಕ್ಕಾಗಿ ನಾವು ಮತ್ತೊಂದು, ಟಿಯರ್ ಗ್ಯಾಸ್, ತರಹ, ಬೇರೆ ತರಹದ ಗ್ಯಾಸನ್ನು, ಯಾವಾಗ ಜನರ ಒಂದು ಭಾವನೆ, ಬೇರೆ ಯಾವುದೇ ಕಾರಣದಿಂದ ಉದ್ರೇಕವಾತಾವರಣ ಆದಕ್ಕೆ ಮಾಬ್ ಸಿಕ್‌ನೆಸ್ ಆಗುತ್ತದೆ, ಆಗ ಈತರಹ ಒಂದು ಪ್ರಯೋಗ ಮಾಡಬೇಕೆಂದು ಹೇಳಿ ನಾವು ಯೋಚನೆ ಮಾಡುತ್ತಿದ್ದೇವೆ.

ದ. ಕ. ಹಾಗೂ ಶಿವಮೊಗ್ಗ ಜಿಲ್ಲೆಗಳ ಅಕ್ಕಿಯ ದರದಲ್ಲಿ ವ್ಯತ್ಯಾಸ.

೧೧೨೩. ಶ್ರೀ ಕೆ. ರಾಮಭಟ್ (ಪುತ್ತೂರು).— ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಮಾರುಕಟ್ಟೆಯಲ್ಲಿ ದೊರೆಯುವ ಅಕ್ಕಿ ಧಾರಣೆಗೂ ರಾಜ್ಯದ ಇತರ ಜಿಲ್ಲೆಗಳಾದ ಶಿವಮೊಗ್ಗ, ಮಂಡ್ಯ, ರಾಯಚೂರು ಜಿಲ್ಲೆಗಳಲ್ಲಿ ಇರುವ ಅಕ್ಕಿ ಧಾರಣೆಗೂ ಎಷ್ಟು ವ್ಯತ್ಯಾಸವಿದೆ ?

(ಆ) ಈ ರೀತಿ ಅಂತರ ಇರಲು ಕಾರಣವೇನು ?

(ಇ) ಈ ರೀತಿಯ ಬೆಲೆ ಅಂತರದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನರು ವರ್ಷ ಒಂದರಲ್ಲೂ ತಗಬೇಕಾದ ಹೆಚ್ಚಿನ ಬೆಲೆಯ ಒಟ್ಟು ಮೊತ್ತ ಎಷ್ಟು ?

(ಈ) ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಒದಗಿದ ಈ ಸಂಕಷ್ಟವನ್ನು ಪರಿಹರಿಸಲು ಸರ್ಕಾರವು ಏನು ಕಾರ್ಯಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ದಕ್ಷಿಣ ಕನ್ನಡ ಜಿಲ್ಲೆಯ ಮಾರುಕಟ್ಟೆಯಲ್ಲಿ ಅಕ್ಕಿಯ (ಸಗಟು) ದರವು ಇತರ ಜಿಲ್ಲೆಗೆ ಹೋಲಿಸಿದಾಗ ಈ ಕೆಳಕಂಡಂತಿದೆ.

(ಸಾಮಾನ್ಯ ದರ್ಜೆ. ಕ್ವಿಂಟಾಲಿಗೆ)

೧) ಶಿವಮೊಗ್ಗ ರೂ. ೩೫೦ ರಿಂದ ೩೯೦.

೨) ಮಂಡ್ಯ ರೂ. ೨೬೦ ರಿಂದ ೩೫೦.

೩) ರಾಯಚೂರು ರೂ. ೩೫೦.

೪) ದಕ್ಷಿಣ ಕನ್ನಡ ರೂ. ೩೦೫ ರಿಂದ ೪೧೦.

(ಆ) ಇತರ ಜಿಲ್ಲೆಗಳಿಗೆ ಹೋಲಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಲೆಗಳ ಅಂತರ ಅಷ್ಟೊಂದು ಹೆಚ್ಚಾಗಿಲ್ಲ. ಅಕ್ಕಿಯ ಉತ್ಪಾದನೆಯಲ್ಲಿ ಈ ಜಿಲ್ಲೆಯು ಕೊರತೆಯ ಜಿಲ್ಲೆಯಾಗಿದ್ದು ಅಕ್ಕಿಯ ಬೆಲೆ ಇತರ ಜಿಲ್ಲೆಗಳಿಗಿಂತ ಸದಾ ಹೆಚ್ಚಿರುತ್ತದೆ.

(ಇ) ಪ್ರಶ್ನೆ (ಅ) ಗೆ ಉತ್ತರ ನೀಡಿದಂತೆಯೇ.

(ಈ) ದಕ್ಷಿಣ ಕನ್ನಡ ಜಿಲ್ಲೆಯು ಅಕ್ಕಿ ಉತ್ಪಾದನೆಯಲ್ಲಿ ಕೊರತೆ ಜಿಲ್ಲೆಯಾದ್ದರಿಂದ ಸರ್ಕಾರವು ಈ ಜಿಲ್ಲೆಗೆ ಅಕ್ಕಿ ಪೂರೈಸುವುದರ ಬಗ್ಗೆ ಸದಾ ವಿಶೇಷ ಗಮನ ಹರಿಸಿದೆ. ಪ್ರತಿ ತಿಂಗಳು ಈ ಜಿಲ್ಲೆಗೆ ೨೫,೦೦೦ದಿಂದ ೩೦ ಸಾವಿರ ಕ್ವಿಂಟಾಲ್‌ವರೆಗೆ ಅಕ್ಕಿ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಕೆ. ರಾಮಭಟ್.—ಮಾನ್ಯ ಅಧ್ಯಕ್ಷರೇ, ಅವರು ಇಲ್ಲಿ ಬೇರೆಬೇರೆ ಜಿಲ್ಲೆಗಳ ಅಕ್ಕಿಯ ದರಗಳನ್ನು ಕೊಟ್ಟಿದ್ದಾರೆ. ಇದನ್ನು ಅವರು ಎಲ್ಲಿಂದ ತಂದಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಶಿವಮೊಗ್ಗದಲ್ಲಿ ೩೫೦ ರಿಂದ ೩೯೦, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೦೫ ರಿಂದ ೪೧೦ ಎಂದು ಕೊಟ್ಟಿದ್ದಾರೆ. ಅವರು ಈ ಅಂಕಿಅಂಶಗಳನ್ನು ಎಲ್ಲಿಂದ ತೆಗೆದುಕೊಂಡರು, ಈ ಉತ್ತರ ಅವರಿಗೆ ಹೇಗೆ ಸಿಕ್ಕಿತು ಗೊತ್ತಿಲ್ಲ ?

ಶ್ರೀ ಜಿ. ಬಸವಣ್ಣಪ್ಪ.— ಸಾಮಾನ್ಯದರ್ಜೆ ಅಕ್ಕಿದರ ಶಿವಮೊಗ್ಗದಲ್ಲಿ ರೂಪಾಯಿ ೩೫೦ ರಿಂದ ೩೯೦ ರೂಪಾಯಿಗಳು ಎಂದು ನಾನು ಹೇಳಿದ್ದು.